ಶ್ರೀ ಎಸ್ ಎ ರವೀಂದ್ರನಾಥ್: ಆ ರೀತಿ ಯಾವುದೇ ಕಾಮಗಾರಿಗಳು ಕಳಪೆಯಾಗಿದ್ದರೆ, ಸುಮಾರಾಗಿ ಇದ್ದರೆ, ಅಲ್ಲಿಯ ಅಧಿಕಾರಿಗಳು ಗಮನಕ್ಕೆ ತಂದರೆ, ಸರಿಯಾದ ರೀತಿಯಾಗಿ ಮಾಡುವಂಥ ಪ್ರಯತ್ನವನ್ನು ಮಾಡುತ್ತೇನೆ.

ಸುವರ್ಣರಸ್ತೆ, ಎಸ್‌ಸಿಪಿ, ಟಿಎಸ್‌ಪಿ, ಯೋಜನೆಗಳ ಅನುಷ್ಠಾನದ ಬಗ್ಗೆ

75(124) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:(ಚಿಕ್ಕೋಡಿ ಸದಲಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆ ವತಿಯಿಂದ ಸುವರ್ಣರಸ್ತೆ ಎಸ್‌ಸಿಪಿ: ಟಿಎಸ್‌ಪಿ ಯೋಜನೆಗಳನ್ನು ಯಾವ ವರ್ಷದಿಂದ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆ ಅನುಷ್ಠಾನಗೊಳಿಸಲು ಅನುಸರಿಸಲಾಗುತ್ತಿರುವ ಮಾರ್ಗಸೂಚಿಗಳೇನು, ಹಾಗಿದ್ದಲ್ಲಿ, ಈ ಮಾರ್ಗಸೂಚಿಗಳನ್ವಯವೇ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆಯೇ?

ಆ) ಈ ಯೋಜನೆಗಳ (ಸುವರ್ಣ ರಸ್ತೆ ಎಸ್‌ಸಿಪಿ:ಟಿಎಸ್‌ಪಿ) ಅಡಿಯಲ್ಲಿ ಚಿಕ್ಕೋಡಿ–ಸದಲಗಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಈ ಯೋಜನೆಗಳು ಜಾರಿಗೆ ಬಂದಂದಿನಿಂದ ಯಾವ್ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ, ಕೈಗೆತ್ತಿಕೊಂಡಿರುವ ಕಾಮಗಾರಿಗಳು ಪೂರ್ಣಗೊಂಡಿವೆಯೇ: ಇಲ್ಲದಿದ್ದಲ್ಲಿ ಕಾರಣವೇನು?

ಇ) ಈ ಕಾಮಗಾರಿಗಳಿಗೆ ಮಂಜೂರಾತಿ ನೀಡುವಾಗ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರದ ಶಾಸಕರ ಗಮನಕ್ಕೆ ತರಲಾಗಿದೆಯೇ? ಇಲ್ಲದಿದ್ದಲ್ಲಿ ಕಾರಣವೇನು (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆ ವತಿಯಿಂದ ಸುವರ್ಣರಸ್ತೆ ವಿಕಾಸ ಯೋಜನೆಯು 2009–10ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಹಾಗೂ ಎಸ್‌ಸಿಪಿ: ಟಿಎಸ್‌ಪಿ ಯೋಜನೆಗಳನ್ನು 2007–08ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಎರಡು ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುಸರಿಸಲಾಗುತ್ತಿರುವ ಮಾರ್ಗಸೂಚಿಗಳ ವಿವರವನ್ನು ಅನುಬಂಧ–1ರಲ್ಲಿ ವಿವರಿಸಿದೆ.

ಈ ಮಾರ್ಗಸೂಚಿಗಳನ್ವಯ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಈ ಯೋಜನೆಗಳ (ಸುವರ್ಣ ರಸ್ತೆ ಎಸ್‌ಸಿಪಿ:ಟಿಎಸ್‌ಪಿ) ಅಡಿಯಲ್ಲಿ ಚಿಕ್ಕೋಡಿ–ಸದಲಗಾ ಮತಕ್ಷೇತ್ರ ವ್ಯಾಪ್ತಿಯಲ್ಲಿ ಈ ಯೋಜನೆಗಳು ಜಾರಿಗೆ ಬಂದಂದಿನಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಮತ್ತು ಪೂರ್ಣಗೊಂಡಿರುವ ಕಾಮಗಾರಿಗಳ ವಿವರ:

ಯೋಜನೆ	2007–08	2008–09	2009–10	2010–2011
ಎಸ್‌ಸಿಪಿ	08 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ.	04 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ.	02 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ.	03 ಕಾಮಗಾರಿಗಳು ಪ್ರಾರಂಭಿಕ ಹಂತದಲ್ಲಿವೆ
ಟಿಎಸ್‌ಪಿ	08 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ.	04 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ	02 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ.	02 ಕಾಮಗಾರಿಗಳು ಪ್ರಾರಂಭಿಕ ಹಂತದಲ್ಲಿವೆ
ಸುವರ್ಣ	–	–	02 ಪ್ರಗತಿಯಲ್ಲಿವೆ.	03

್ ರಸ್ತೆ				ಕಾಮಗಾರಿಗಳು ಪ್ರಾರಂಭಿಕ ಹಂತದಲ್ಲಿವೆ.
ಕಾಮಗಾರಿವಾರು ವಿವರಗಳನ್ನು ಅನುಬಂಧ–2ರಲ್ಲಿ ವಿವರಿಸಿದೆ.				

ಇ) 2007–08 ಮತ್ತು 2008–09ನೇ ಸಾಲಿನಲ್ಲಿ ಎಸ್.ಸಿ.ಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ನೇರವಾಗಿ ಉಪಯೋಗವಾಗುವಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿ 2009–10 ಮತ್ತು 2010–11ನೇ ಸಾಲಿನಲ್ಲಿ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರ ಶಾಸಕರ ಗಮನಕ್ಕೆ ತಂದು ಕ್ರಿಯಾ ಯೋಜನೆಯನ್ನು ರೂಪಿಸಿ ಇದರನ್ವಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಸುವರ್ಣ ರಸ್ತೆ ವಿಕಾಸ ಯೋಜನೆಯಡಿ 2009–10ನೇ ಸಾಲಿನಲ್ಲಿ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರಗಳ ಶಾಸಕರ ಗಮನಕ್ಕೆ ತಂದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಯಿತು ಮತ್ತು 2010–11ನೇ ಸಾಲಿನಲ್ಲಿ ಸಂಬಂಧಿತ ಕ್ಷೇತ್ರದ ಶಾಸಕರ ಗಮನಕ್ಕೆ ತಂದು ಕ್ರಿಯಾ ಯೋಜನೆಯನ್ನು ರೂಪಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ವಿಧಾನ ಸಭೆಯ ಸದಸ್ಯರಾದ ಶ್ರೀ.ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 124ಕ್ಕೆ ಉತ್ತರ ::

ಅನುಬಂಧ–1

ಸುವರ್ಣರಸ್ತೆ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸಲಾಗುತ್ತಿರುವ ಮಾರ್ಗಸೂಚಿಗಳು

1. ಸುವರ್ಣ ರಸ್ತೆ ವಿಕಾಸ ಯೋಜನೆಯಡಿ ಈ ಸಾಲಿನಲ್ಲಿ ರೂ.17500.00ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಕಾಮಗಾರಿಗಳ ಕ್ರಿಯಾ ಯೋಜನೆಯನ್ನು 2009–10ನೇ ಸಾಲಿನ ರೂ.20000.00ಲಕ್ಷಗಳ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಉಳಿದ 50ಭಾಗವಾದ

ರೂ.10000.00ಲಕ್ಷಗಳ ಅನುದಾನವನ್ನು ಒದಗಿಸಿ, ಕಳೆದ ಸಾಲಿನ ಅನುಮೋದಿತ ಕ್ರಿಯಾಯೋಜನೆಯಲ್ಲಿರುವ ಕಾಮಗಾರಿಗಳನ್ನು ಮಾತ್ರ ಮುಂದುವರೆಸಲಾಗಿದೆ.

2. ಹೊಸ ಕಾಮಗಾರಿಗಳನ್ನು 1:2 ಅನುಪಾತಕ್ಕೆ ಅಂದರೆ ರೂ.7500x2= 15000.00ಲಕ್ಷಗಳಿಗೆ ಸೀಮಿತಗೊಳಿಸಿ ಕೈಗೆತ್ತಿಕೊಳ್ಳಲಾಗಿದೆ.
3. ಈ ಯೋಜನೆಯಡಿ ಸೇರ್ಪಡೆಗೊಂಡಿರುವ ಕಾಮಗಾರಿಗಳು ಇತರೇ ಯಾವುದೇ ಯೋಜನೆಯಡಿ ಅಥವಾ ಅಪೆಂಡಿಕ್ಸ್–ಇನಲ್ಲಿ ಸೇರ್ಪಡೆಗೊಂಡಿರುವುದಿಲ್ಲ ಎಂಬುದನ್ನು ಪರಿಗಣಿಸಲಾಗಿದೆ.
4. ಒಂದು ವಿಧಾನಸಭಾ ಕ್ಷೇತ್ರದಲ್ಲಿ ಒಂದೇ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಹಾಗೂ ಗಣನೀಯ ಅಭಿವೃದ್ಧಿ (visible improvement)ನ್ನು ಗುರಿಯನ್ನಾಗಿಸಿಕೊಂಡು ಸಾಧ್ಯವಾದ ಮಟ್ಟಿಗೆ ಎರಡು ಮೂರು ಕ್ಷೇತ್ರಗಳಲ್ಲಿ ಹಾದುಹೋಗುವ ಒಂದೇ ರಸ್ತೆಯನ್ನು ಗುರುತಿಸಿ ಅಭಿವೃದ್ಧಿಪಡಿಸಲಾಗಿದೆ.

ವಿಶೇಷ ಘಟಕ ಯೋಜನೆ(ಎಸ್.ಸಿಪಿ) ಮತ್ತು ಗಿರಿಜನ ಉಪಯೋಜನೆ (ಟಿಎಸ್.ಪಿ)ಗಳನ್ನು ಅನುಷ್ಠಾನಗೊಳಿಸಲು ಅನುಸರಿಸಲಾಗುತ್ತಿರುವ ಮಾರ್ಗಸೂಚಿಗಳು

ಮೊದಲನೆಯದಾಗಿ, ಎಸ್.ಸಿ.ಪಿ ಮತ್ತು ಟಿ.ಎಸ್.ಪಿಯಡಿ ಅನುದಾನವನ್ನು ಜನಸಂಖ್ಯೆಯ ಆಧಾರದ ಮೇಲೆ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗಿದ್ದು ಇದನ್ನು ಗಮನದಲ್ಲಿರಿಸಿ ಕಾಮಗಾರಿವಾರು ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ.

1. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ನೇರವಾಗಿ ಉಪಯೋಗವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಲು 2001ರ ಜನಗಣತಿ ಆಧಾರದ ಮೇಲೆ ವಿಧಾನಸಭಾ ಕ್ಷೇತ್ರಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಆಧಾರದ ಮೇಲೆ (ನಗರ ಕ್ಷೇತ್ರಗಳನ್ನು ಹೊರತುಪಡಿಸಿ) ಅನುದಾನ ಹಂಚಿಕೆ ಮಾಡಲಾಗಿದೆ. ಈ ಹಂಚಿಕೆ ಮಾಡಲಾದ ಅನುದಾನಕ್ಕನುಗುಣವಾಗಿ ಆಯಾ ಪ್ರದೇಶಗಳ ಜನಸಂಖ್ಯೆ ಆಧರಿಸಿ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆಯನ್ನು

ರೂಪಿಸುವುದು. ಅನುಸೂಚಿತ ಜಾತಿ ಮತ್ತು ಪಂಗಡಗಳ ಜನರು ಹೆಚ್ಚಾಗಿ ವಾಸಮಾಡುವಂತಹ ಕಾಲೋನಿಗಳನ್ನು ಗುರುತಿಸಿ ಇಂತಹ ಕಾಲೋನಿಗಳಲ್ಲಿನ ರಸ್ತೆಗಳನ್ನು ಮತ್ತು ಕಾಲೋನಿಗಳಿಂದ ಮುಖ್ಯ ರಸ್ತೆಗಳನ್ನು ಸಂಪರ್ಕಿಸುವ (Connecting Roads to SC/ST Colonies) ರಸ್ತೆಗಳ ಅಭಿವೃದ್ಧಿ, ಡಾಂಬರು ರಸ್ತೆಗಳನ್ನು ಹೊಂದಿರದಂತಹ ಕಾಲೋನಿಗಳಲ್ಲಿ ಅಂತಹ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಮತ್ತು ಈ ಕಾಲೋನಿಗಳಲ್ಲಿ ಒಳಚರಂಡಿ ವ್ಯವಸ್ಥೆಗೆ ಒತ್ತು ನೀಡಿ ಕ್ರಿಯಾಯೋಜನೆಯನ್ನು ರೂಪಿಸಲಾಗಿದೆ.

2. ಯಾವುದೇ ಕಾರಣಾಂತರಗಳಿಂದಲಾದರೂ ಎಸ್.ಸಿ. ಮತ್ತು ಎಸ್.ಟಿ.ಕಾಲೋನಿ ರಸ್ತೆಗಳನ್ನು ಹೊರತು ಪಡಿಸಿ ಇತರೆ ರಸ್ತೆಗಳನ್ನು ಕೈಗೆತ್ತಿಗೊಂಡಿರುವುದಿಲ್ಲ.

3. ರಸ್ತೆಗಳನ್ನು ಆಯ್ಕೆ ಮಾಡುವಾಗ ಲೋಕೋಪಯೋಗಿ ರಸ್ತೆ ಇಲ್ಲದಿದ್ದ ಪಕ್ಷದಲ್ಲಿ ಇತರೆ ರಸ್ತೆಗಳನ್ನು ಕೈಗೆತ್ತಿಕೊಳ್ಳಬಹುದಾಗಿದ್ದು ಇದಕ್ಕೆ ಯಾವುದೇ ಅಭ್ಯಂತರವಿರುವುದಿಲ್ಲ. (ಉದಾ:ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗೊಳಪಟ್ಟ ರಸ್ತೆಗಳು) ಆದರೆ ಈ ರಸ್ತೆಗಳು ನೇರವಾಗಿ ಎಸ್.ಸಿ ಅಥವಾ ಎಸ್.ಟಿ.ಜನಾಂಗಕ್ಕೆ ಉಪಯೋಗವಾಗುವಂತಹ ರಸ್ತೆಗಳನ್ನು ಮಾತ್ರ ಪರಿಗಣಿಸಲಾಗಿದೆ.

4. ರಸ್ತೆಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ, ಆಯ್ಕೆ ಮಾಡಲಾಗುವ ರಸ್ತೆಗಳು ಇತರೇ ಯಾವುದೇ ಯೋಜನೆಗಳಲ್ಲಿ ಸೇರ್ಪಡೆಗೊಂಡಿರುವುದಿಲ್ಲ ಎಂಬುದನ್ನು ಪರಿಗಣಿಸಲಾಗಿದೆ.

ಅನುಬಂಧ–2/ANNEXURE-II

ಮಾನ್ಯ ಶ್ರೀಪ್ರಕಾಶ.ಬಾಬಣ್ಣ.ಹುಕ್ಕೇರಿ, (ಚಿಕ್ಕೋಡಿ–ಸದಲಗಾ), ವಿಧಾನ ಸಭಾ ಸದಸ್ಯರು/ವಿಧಾನ ಪರಿಷತ್ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.124ಕ್ಕೆ ಕರಡು ಉತ್ತರಗಳು

ಸುವರ್ಣ ರಸ್ತೆ / ಎಸ್.ಸಿ.ಪಿ. ಅಡಿಯಲ್ಲಿ ಚಿಕ್ಕೋಡಿ–ಸದಲಗಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ವಿವರ ಈ ಕೆಳಗಿನಂತೆ ಇರುತ್ತದೆ.

ಕ್ರಸಂ.	ಮತಕ್ಷೇತ್ರ	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಬಿಡುಗಡೆಯಾದ ಅನುದಾನ ರೂ.ಲಕ್ಷಗಳಲ್ಲಿ	ಕಾಮಗಾರಿ ಹಂತ
1	2	3	4	5	6
2007-08					
ಎಸ್.ಸಿ.ಪಿ					
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲ್ಲೂಕಿನ ಚಿಂಚಣಿ ಕುಪ್ಪಾಣವಾಡಿ ರಸ್ತೆ ಸುಧಾರಣೆ	4.69	4.69	ಕೆಲಸ ಮುಗಿದಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲ್ಲೂಕಿನ ಬೇಡಕಹಾಳ ಅಂಬೇಡ್ಕರ ಭವನದಿಂದ ನೇಜ ಕ್ರಾಸವರೆಗೆ ರಸ್ತೆ ಸುಧಾರಣೆ	4.69	4.69	ಕೆಲಸ ಮುಗಿದಿದೆ.
3	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಶೆಟ್ಟಿಹಳ್ಳಿ ಇಚಲಕರಂಜಿ ರಸ್ತೆ ಕಿಮೀ ನಂ.55.00, 56.00 61.00 ಮತ್ತು 63.00 ರಲ್ಲಿ ಸುಧಾರಣೆ	16.93	16.93	ಕೆಲಸ ಮುಗಿದಿದೆ.
4	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲ್ಲೂಕಿನ ಶೆಟ್ಟಿಹಳ್ಳಿ ಇಚಲಕರಂಜಿ ರಸ್ತೆ ಕಿಮೀ ನಂ.82.00 ರಿಂದ 83.00ರಲ್ಲಿ	16.93	16.93	ಕೆಲಸ ಮುಗಿದಿದೆ.

0-242-43

		ಸುಧಾರಣೆ			
5	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲ್ಲೂಕಿನ ಕುಪ್ಪಾನವಾಡಿಯಿಂದ ಚಿಂಚಣಿ ರಸ್ತೆಗೆ ಕೂಡು ರಸ್ತೆ ಸುಧಾರಣೆ	4.38	4.38	ಕೆಲಸ ಮುಗಿದಿದೆ
6	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲ್ಲೂಕಿನ ಭೋಜ ಆಶ್ರಯ ಕಾಲನಿಯಿಂದ ಸಂಕೇಶ್ವರ ಸದಲಗಾ ರಸ್ತೆಗೆ ಕೂಡು ರಸ್ತೆ ಸುಧಾರಣೆ	4.38	4.38	ಕೆಲಸ ಮುಗಿದಿದೆ
7	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಶೆಟ್ಟಿಹಳ್ಳಿ ಇಚಲಕರಂಜಿ ರಸ್ತೆ ಕಿಮೀ ನಂ.61.86ರಲ್ಲಿ ಸೇತುವೆ ನಿರ್ಮಾಣ	0.75	0.75	ಕೆಲಸ ಮುಗಿದಿದೆ
8	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಶೆಟ್ಟಿಹಳ್ಳಿ ಇಚಲಕರಂಜಿ ರಸ್ತೆ ಕಿಮೀ ನಂ.93.00 ರಲ್ಲಿ ಸೇತುವೆ ನಿರ್ಮಾಣ	0.75	0.75	ಕೆಲಸ ಮುಗಿದಿದೆ.
ಟಿ.ಎಸ್.ಪಿ					
1	ಚಿಕ್ಕೋಡಿ	ಚಿಕ್ಕೋಡಿ ತಾಲ್ಲೂಕಿನ	1.99	1.99	ಕೆಲಸ

	– ಸದಲಗಾ	ಚಿಕ್ಕೋಡಿ ನಾಗರಾಳ ರಸ್ತೆ ಸುಧಾರಣೆ			ಮುಗಿದಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಬೋಜ ಅಂಬೇಡ್ಕರ ಪ್ರತಿಮೆಯಿಂದ ಸಂಕೇಶ್ವರ ಸದಲಗಾ ರಸ್ತೆಗೆ ಅಪ್ರೋಚ ರಸ್ತೆ ಸುಧಾರಣೆ	1.99	1.99	ಕೆಲಸ ಮುಗಿದಿದೆ.
3	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಸಂಕೇಶ್ವರ ಸದಲಗಾ ರಸ್ತೆ ಕಿಮೀ ನಂ.6.40 ರಿಂದ 7.50 ಮತ್ತು 69.00 ರಿಂದ 27.00 ರವರೆಗೆ ಸುಧಾರಣೆ	6.43	6.43	ಕೆಲಸ ಮುಗಿದಿದೆ.
4	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಭಾಟನಾಗನೂರ ಬೋರಗಾವವಾಡಿ ರಸ್ತೆ ಕಿಮೀ ನಂ.40.00 ಮತ್ತು 41.00 ರಲ್ಲಿ ಸುಧಾರಣೆ	6.43	6.43	ಕೆಲಸ ಮುಗಿದಿದೆ.
5	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಕೋಥಳಿ ಕುಪ್ಪನವಾಡಿ ರಸ್ತೆ ಸುಧಾರಣೆ	1.81	1.81	ಕೆಲಸ ಮುಗಿದಿದೆ.
6	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಬಾರವಾಡದಿಂದ ರಾಜ್ಯ ಗಡಿಯವರೆಗೆ ರಸ್ತೆ ಸುಧಾರಣೆ	1.81	1.81	ಕೆಲಸ ಮುಗಿದಿದೆ
7	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಮುಧೋಳ ನಿಪ್ಪಾಣಿ ರಸ್ತೆ ಮೇಲೆ ಕಿಮೀ	0.31	0 31	ಕೆಲಸ ಮುಗಿದಿದೆ

		ನಂ.79.00 ರಲ್ಲಿ ಸೇತುವೆ ನಿರ್ಮಾಣ			
8	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಶೆಟ್ಟಿಹಳ್ಳಿ ಇಚಲಕರಂಜಿ ರಸ್ತೆ ಮೇಲೆ ಕಿಮೀ ನಂ.82.50ರಲ್ಲಿ ಸೇತುವೆ ನಿರ್ಮಾಣ	0.31	0.31	ಕೆಲಸ ಮುಗಿದಿದೆ.
2008–09					
ಸುವರ್ಣ ರಸ್ತೆ ವಿಕಾಸ ಯೋಜನೆ					
1	ಚಿಕ್ಕೋಡಿ – ಸದಲಗಾ	ಸದರಿ ವರ್ಷದಲ್ಲಿ ಈ ಯೋಜನೆಯು ಇರುವುದಿಲ್ಲ			
ಎಸ್.ಸಿ.ಪಿ					
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಕೇರೂರ ಕಾಡಪೂರ ಮುಖಾಂತರ ಜೆ.ಸಿ.ಎಸ್. ರಸ್ತೆ ಕೂಡುವ ರಸ್ತೆ ಕಿಮೀ ನಂ.3.20 ರಿಂದ 4.00 ರವರೆಗೆ ಸುಧಾರಣೆ	7.80	7.80	ಕೆಲಸ ಮುಗಿದಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಶೆಟ್ಟಿಹಳ್ಳಿ ಇಚಲಕರಂಜಿ ರಸ್ತೆ ಕಿಮೀ ನಂ.82.00 ರಿಂದ 83.00 ರವರೆಗೆ ರಸ್ತೆ ಸುಧಾರಣೆ	10.70	10.70	ಕೆಲಸ ಮುಗಿದಿದೆ.
3	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಶಮನೇವಾಡಿ ಗ್ರಾಮದಿಂದ ಪರಿಮಿತಿಯಲ್ಲಿ ರಿಂಗ್ ರಸ್ತೆ ನಿರ್ಮಾಣ	3.20	3.20	ಕೆಲಸ ಮುಗಿದಿದೆ.
4	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಸಂಕೇಶ್ವರ ಸದಲಗಾ ರಸ್ತೆ ಕಿಮೀ ನಂ.44.00 ರಲ್ಲಿ	0.75	0.75	ಕೆಲಸ ಮುಗಿದಿದೆ.

		ಸಿ.ಡಿ.ನಿರ್ಮಾಣ			
		ಟಿ.ಎಸ್.ಪಿ			
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲ್ಲೂಕಿನ ಖಡಕಲಾಟ ಮನೂಚಿವಾಡಿ ರಸ್ತೆ ಕಿಮೀ ನಂ.5.00ರಲ್ಲಿ ಸುಧಾರಣೆ	0.50	0.50	ಕೆಲಸ ಮುಗಿದಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಸಂಕೇಶ್ವರ ಸದಲಗಾ ರಸ್ತೆ ಕಿಮೀ ನಂ.26.00 ರಲ್ಲಿ ಸುಧಾರಣೆ	0.65	0.65	ಕೆಲಸ ಮುಗಿದಿದೆ.
3	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಬಸನಾಳಗಡ್ಡೆ ಬಿಲನಸಾಬ ದರ್ಗಾ ರಸ್ತೆ ಸುಧಾರಣೆ	0.25	0.25	ಕೆಲಸ ಮುಗಿದಿದೆ.
4	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಬಸನಾಳಗಡ್ಡೆ ಬಿಲನಸಾಬ ದರ್ಗಾ ರಸ್ತೆ ಕಿಮೀ ನಂ.1.00ರಲ್ಲಿ ಸಿ.ಡಿ. ನಿರ್ಮಾಣ	0.19	0.19	ಕೆಲಸ ಮುಗಿದಿದೆ.
		2009–10			
		ಸುವರ್ಣ ರಸ್ತೆ ವಿಕಾಸ ಯೋಜನೆ			
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಬಾಳೋಬಾ ಕ್ರಾಸದಿಂದ ಖಡಕಲಾಟ ಕೋಥಳಿ ಶಾಂತಿಗಿರಿ ಚಿಂಚಣಿ ರಸ್ತೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಮಾಡುವುದು (ಕಿಮೀ 12.00)	54.16	54.16	ಕಾಮಗಾರಿಯು ಮುಗಿಯುವ ಹಂತದಲ್ಲಿದೆ
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ನಾಗರಮುನ್ನೋಳ್ಳಿ ಜೋಡಕುರಳಿ ಕೇರೂರ ಬಿಜಾಪೂರ ಸಂಕೇಶ್ವರ ರಸ್ತೆ ಮುಖಾಂತರ	50.00	50.00	ಕಾಮಗಾರಿ ಪ್ರಗತಿಯಲ್ಲಿದೆ.

		ಲಕ್ಷ್ಮೀ ನಗರ ಫ್ಯಾಕ್ಟರಿವರೆಗೆ ರಸ್ತೆ ಅಭಿವೃದ್ಧಿ ಮಾಡುವುದು (ಕಿಮೀ 10.00)			
ಪಿಸ್.ಸಿ.ಪಿ					
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಚಿಂಚಣಿ ಹರಿಜನವಾಡ ರಸ್ತೆ ಸುಧಾರಣೆ	10.00	10.00	ಕೆಲಸ ಮುಗಿದಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಚಿಂಚಣಿ ಶಿರಗಾವ ರಸ್ತೆಯಿಂದ ಶಾಂತಿಗಿರಿ ಕೂಡು ರಸ್ತೆ ಸುಧಾರಣೆ	10.00	10.00	ಕೆಲಸ ಮುಗಿದಿದೆ.
ಟಿ.ಎಸ್.ಪಿ					
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಸದಲಗಾ ಸಂಕೇಶ್ವರ ರಸ್ತೆ ಖಡಕಲಾಟ ಗ್ರಾಮ ಪರಿಮಿತಿಯಲ್ಲಿ ಚರಂಡಿ ನಿರ್ಮಾಣ	0.53	0.53	ಕೆಲಸ ಮುಗಿದಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಸದಲಗಾ ಹರಿಜನಕೇರಿ ಒಳ ರಸ್ತೆ ಮೇಲೆ ಸಿ.ಡಿ. ನಿರ್ಮಾಣ	0.68	0.68	ಕೆಲಸ ಮುಗಿದಿದೆ.
2010–11					
ಸುವರ್ಣ ರಸ್ತೆ ವಿಕಾಸ ಯೋಜನೆ					
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಯಡೂರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಮಾಂಜರಿ ಬಸ್ ನಿಲ್ದಾಣದವರೆಗೆ ರಸ್ತೆ ಸುಧಾರಣೆ (ನಿಪ್ಪಾಣಿ ಕೊಟ್ಟಲಗಿ ರಾಜ್ಯ	2.64	13.02	ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.

		ಹೆದ್ದಾರಿ)			
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಖಿಡಕಲಾಟ ಲಕ್ಷ್ಮೀ ದೇವಸ್ಥಾನದಿಂದ ಖಿಡಕಲಾಟ ಗ್ರಾಮದವರೆಗೆ ರಸ್ತೆ ಸುಧಾರಣೆ (ಸಂಕೇಶ್ವರ ಸದಲಗಾ ರಾಜ್ಯ ಹೆದ್ದಾರಿ)	26.04	13.02	ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಗಿದೆ.
3	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ನಿಪ್ಪಾಣಿ ಕೊಟ್ಟಲಗಿ ರಾಜ್ಯ ಹೆದ್ದಾರಿ ಕಿಮೀ ನಂ.59.50 ರಿಂದ 64.00 ರವರೆಗೆ ರಸ್ತೆ ಸುಧಾರಣೆ (ಇಂಗಳಿ ಗ್ರಾಮದಿಂದ ಶಿರಗುಪ್ಪಿ)	26.04	13.02	ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.
ಎಸ್.ಸಿ.ಪಿ					
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಹಂಡ್ಯಾನವಾಡಿ ಗ್ರಾಮದ ಕಾಲನಿ ರಸ್ತೆ ಸುಧಾರಣೆ	6.81	6.81	ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ಚಿಕ್ಕೋಡಿ ಪಟ್ಟಣದ ಹರಿಜನಕೇರಿಯಲ್ಲಿ ರಸ್ತೆ ಸುಧಾರಣೆ	27.04	27.04	ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.
3	ಚಿಕ್ಕೋಡಿ	ಚಿಕ್ಕೋಡಿ ತಾಲೂಕಿನ	20.18	20.18	ಕ್ರಿಯಾ

	– ಸದಲಗಾ	ಸದಲಗಾ ಪಟ್ಟಣದ ಹರಿಜನಕೇರಿಯಲ್ಲಿ ರಸ್ತೆ ಸುಧಾರಣೆ			ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.
ಟಿ.ಎಸ್.ಪಿ.					
1	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ನೇಜ ಗ್ರಾಮದ ಪರಿಶಿಷ್ಟ ಪಂಗಡದ ಪೂರ್ವ ಭಾಗದ ವಸಾಹತುವಿನಲ್ಲಿ ರಸ್ತೆ ಸುಧಾರಣೆ (ಭಾಗ–2)	1.66	1.66	ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.
2	ಚಿಕ್ಕೋಡಿ – ಸದಲಗಾ	ಚಿಕ್ಕೋಡಿ ತಾಲೂಕಿನ ನೇಜ ಗ್ರಾಮದ ಪರಿಶಿಷ್ಟ ಪಂಗಡದ ಪಶ್ಚಿಮ ಭಾಗದ ವಸಾಹತುವಿನಲ್ಲಿ ರಸ್ತೆ ಸುದಾರಣೆ (ಭಾಗ–1)	1.47	1.47	ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ, SCP & TSP ಯೋಜನೆಯನ್ನು ಮಾಡುವಾಗ ಆ ಶಾಸಕರನ್ನು ಕೇಳುತ್ತೇವೆಂದು ಹೇಳಿದ್ದರು, ಆದರೆ ಉತ್ತರದಲ್ಲಿ ಏನು ಕೊಟ್ಟಿದ್ದಾರೆಂದರೆ, 2007–08 ಮತ್ತು 2008–09ನೇ ಸಾಲಿನಲ್ಲಿ SCP & TSP ಯೋಜನೆಯಲ್ಲಿ ನಾವು ಶಾಸಕರನ್ನು ಕೇಳಿಲ್ಲ ಉಳಿದ ಎರಡು ವರ್ಷದ್ದನ್ನು ಶಾಸಕರ ಗಮನಕ್ಕೆ ತಂದಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಒಂದು ವಿಷಯವೇನೆಂದರೆ, ಶಾಸಕರು 2007–08, 2008–09ರಲ್ಲಿ ನಾವು ಶಾಸಕರು ಇದ್ದೇವೋ ಇಲ್ಲವೋ, ಆ ವೇಳೆಯಲ್ಲಿ ನಮ್ಮ ಗಮನಕ್ಕೆ ತರದೇ ಈ ಕ್ರಿಯಾಯೋಜನೆ ನಿರ್ಮಾಣ ಮಾಡುವಂಥ ಪರಿಸ್ಥಿತಿ ಏಕೆ ನಿರ್ಮಾಣವಾಯಿತು? ಇವತ್ತೇನು ಈ ಕ್ರಿಯಾ ಯೋಜನೆ ಮಾಡಿದ್ದಾರೆ, ಇದರಲ್ಲಿ ಸುಮಾರು SCPಗೆ 56

ಲಕ್ಷ ಖರ್ಚು ಮಾಡಿದ್ದೀರಿ, 2008–09ನೇ ಸಾಲಿನಲ್ಲಿ ರೂ. 53,41,000 ಖರ್ಚು ಮಾಡಲಾಗಿದೆ, 2007–08ರಲ್ಲಿ TSPಗೆ 21 ಲಕ್ಷ 2008–09ರಲ್ಲಿ 12 ಲಕ್ಷ ಈ ರೀತಿ ಹಣ ಖರ್ಚು ಮಾಡಿ ಕಾಮಗಾರಿ ಪೂರ್ತಿಯಾಗಿದೆ ಎಂದು ಹೇಳಿದ್ದೀರಿ. ಈ ವಿಷಯವನ್ನು ತಾವು ಅರ್ಜಿ ಸಮಿತಿಯಲ್ಲಿದ್ದಾಗ ತಮ್ಮ ಗಮನಕ್ಕೆ ತಂದಿದ್ದೇನೆ. 2007–08 ಮತ್ತು 2008–09ನೇ ಸಾಲಿನಲ್ಲಿ ಒಂದಾದರೂ SCP ರಸ್ತೆಯನ್ನು ತೆಗೆದುಕೊಂಡಿದ್ದಾರಾ? ಒಂದೇ ಒಂದು ಇದೆ, ಶಮನೆವಾಡಿಯಲ್ಲಿ ಹರಿಜನಕೇರಿಯಲ್ಲಿ ಗ್ರಾಮ ಸುಧಾರಣೆಯದು 10 ಲಕ್ಷ ರೂಪಾಯಿಯದು ಬಿಟ್ಟರೆ, ಇವೆಲ್ಲಾ ರಾಜ್ಯ ರಸ್ತೆಗಳು, ಇನ್ಸಾಲ್ ಕರಂಜಿ, ಶೆಟ್ಟಿಹಳ್ಳಿ, ಇವೆಲ್ಲಾ ರಾಜ್ಯರಸ್ತೆಗಳು, ಇವೆಲ್ಲಾ ರಾಜ್ಯ ಹೆದ್ದಾರಿ ರಸ್ತೆಗಳಿರುವುದರಿಂದ ಇವು SC ಕಾಲೋನಿಗಳೆಂದು ಹೇಳುವ ಪ್ರಶ್ನೆಯೇ ಬರುವುದಿಲ್ಲ

ಅಧ್ಯಕ್ಷರು: ಮಂತ್ರಿಗಳು ಉತ್ತರ ಹೇಳಲಿ ಅನಂತರ ಸ್ಪಷ್ಟೀಕರಣ ಕೇಳಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ: ನಾನು ರಸ್ತೆಗಳ ಹೆಸರನ್ನು ಹೇಳುತ್ತೇನೆ, ಒಂದಾದರೂ SC ಕಾಲೋನಿಯ ಯಾವುದಾದರೂ ರಸ್ತೆಗಳಿದ್ದೇವೆಯೋ ಎಂದು ಬೇಕಾದರೆ ಹೇಳಲಿ.

ಶ್ರೀ ಸಿ ಎಂ ಉದಾಸಿ: ಮಾನ್ಯ ಅಧ್ಯಕ್ಷರೆ, ಪ್ರಕಾಶ್ ಹುಕ್ಕೇರಿಯವರು ಪೂರ್ವಾಗ್ರಹ ಪೀಡಿತರಾಗಿ ಮಾತನಾಡಬಾರದು, ಏಕೆಂದರೆ, ತಮಗೆ ಗೊತ್ತಿರಬಹುದು ರಸ್ತೆಗಳನ್ನು ಆಯ್ಕೆ ಮಾಡುವಾಗ ಲೋಕೋಪಯೋಗಿ ರಸ್ತೆಗಳಿಲ್ಲದಿದ್ದ ಪಕ್ಷದಲ್ಲಿ ಇತರೆ ರಸ್ತೆಗಳನ್ನು ಕೈಗೊಳ್ಳಬೇಕಾಗಿದ್ದು. ಅವು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ರಸ್ತೆಗಳಿರಬಹುದು, ಅಥವಾ ನೇರವಾಗಿ ಎಸ್.ಸಿ. ಎಸ್.ಟಿ. ಜನಾಂಗಕ್ಕೆ ಉಪಯೋಗವಾಗುವ ರಸ್ತೆಗಳು ಮಾತ್ರ ಪರಿಶೀಲನೆಗೆ ತೆಗೆದುಕೊಳ್ಳುತ್ತೇವೆ. ಎಸ್.ಸಿ. ಎಸ್.ಟಿ. ಜನಾಂಗಕ್ಕೆ ಅನುಕೂಲವಾಗುವ ಯಾವುದಾದರೂ ರಸ್ತೆಗಳು ಇದ್ದರೆ ತೆಗೆದುಕೊಳ್ಳಬಹುದು ಎಂದು ಇದೆ. ಬಹುತೇಕ ಶಾಸಕರ ಅಭಿಪ್ರಾಯ ತೆಗೆದುಕೊಂಡೇ ಮಾಡುತ್ತಾರೆ. ಈಗ ಮಾಡುವಾಗ ನಿಮಗೆ ಕೇಳಿಯೇ ಮಾಡಿದ್ದಾರೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ: 2009–10 ಕೇಳಿ ಮಾಡಿದ್ದಾರೆ, 2007–08, 2008–09 ರಲ್ಲಿ ರಾಜ್ಯ ಹೆದ್ದಾರಿ ಮತ್ತು MDR ರೋಡ್ ಮೇಲೆ ಈ ರಸ್ತೆಗಳನ್ನು

ತೆಗೆದುಕೊಂಡಿದ್ದಾರೆ. ನೀವು ನೋಡಿ, ನೀವು ಅಧಿಕಾರಿಗಳನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಬೇಡಿ. ಇದರಲ್ಲಿ ಪರಿಸ್ಥಿತಿ ಏನಿದೆ ಎಂದು ನೋಡಿ. ಇದರಲ್ಲಿ ಒಂದಾದರೂ ತಪ್ಪು ಮಾಹಿತಿ ನಾನು ತಮಗೆ ಹೇಳುತ್ತಿದ್ದರೆ, ಹೇಳಿ.

ಶ್ರೀ ಸಿ ಎಂ ಉದಾಸಿ: ಮಾನ್ಯ ಅಧ್ಯಕ್ಷರೆ, ನಾನು ಹೇಳಿದೆ, ಇದನ್ನು ಆಯ್ಕೆ ಮಾಡುವಾಗ ನಿಮ್ಮ ಅಭಿಪ್ರಾಯ ಕೇಳಿ ಮಾಡಿರಬೇಕು. ಇದರಲ್ಲಿ ಎರಡು ಮಾತಿಲ್ಲ. ಇದನ್ನು ನಾನು ವಿಚಾರಣೆ ಮಾಡುತ್ತೇನೆ. ಆದರೆ ನನಗೆ ಗೊತ್ತಿರುವ ಹಾಗೆ ಈ ವರ್ಷ ತೆಗೆದುಕೊಂಡಿರುವುದೂ ಕೂಡ ನಿಮ್ಮ ಕಡೆಯಿಂದ ಅಭಿಪ್ರಾಯ ತೆಗೆದುಕೊಂಡು ಮಾಡಿದ್ದಾರೆ. ನನಗೆ ಗೊತ್ತಿದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಇದರಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದೀರಿ. 2007–08, 2008–09 ನಾವು ಶಾಸಕರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡಿಲ್ಲ, 2008–09, 2009–10ನೇ ಸಾಲಿನಲ್ಲಿ ಶಾಸಕರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ನಾನು ಈ ಎರಡು ವರ್ಷವಿದ್ದು ನಿಮಗೆ ಕೇಳುತ್ತಿಲ್ಲ. 2007–08, 2008–09ನೇ ಸಾಲಿನಲ್ಲಿ ಅಧಿಕಾರಿಗಳು ಏಕೆ ನಮ್ಮ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡಿಲ್ಲ?

ಶ್ರೀ ಉಮೇಶ್ ವಿ ಕತ್ತಿ: ಇಚಲಕರಂಜಿ, ಶೆಟ್ಟಿಹಳ್ಳಿ ಹಾಗೂ ಶಿರಗಾವವಾಡಿ ರಸ್ತೆಗಳಲ್ಲಿ ಹಳ್ಳಿಗಳು ಬರುತ್ತವೆ. ಇಲ್ಲಿ ಕೂಡ ಎಸ್.ಸಿ.ಕಾಲೋನಿಗಳಿವೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ: ಅವರು ಹುಕ್ಕೇರಿ ಕ್ಷೇತ್ರದ ಶಾಸಕರು. ಚಿಕ್ಕೋಡಿ ಸದಲಗ ಕ್ಷೇತ್ರದ ಶಾಸಕರಲ್ಲ ಅವರು. ಸುಮ್ಮನೆ ಅವರು ಏನಾದರೂ ಹೇಳಿದರೆ ನಾವು ಒಪ್ಪಬೇಕಾ? ಮಾನ್ಯ ಉಮೇಶ್ ಕತ್ತಿಯವರು ಏನು ಹೇಳುತ್ತಾರೆ, ಎಸ್.ಸಿ. ಕಾಲೋನಿಗಳು ವಾಸವಿರುವ ಕಡೆ ರಸ್ತೆಗಳಿದ್ದರೆ, ನೀವು ಏನು ಶಿಕ್ಷೆ ಕೊಡುತ್ತೀರಿ ನಾನು ಸ್ವೀಕರಿಸುವುದಕ್ಕೆ ತಯಾರಿದ್ದೇನೆ. ಶೆಟ್ಟಿ ಹಳ್ಳಿ ಇಚಲಕರಂಜಿ 55 ರಿಂದ 56 ಇದು ಎಸ್.ಸಿ. ಕಾಲೋನಿಯಲ್ಲಿ ಬರುತ್ತವೆ.

ಶ್ರೀ ಸಿ ಎಂ ಉದಾಸಿ: ಕಲೆಕ್ಟೀವ್ ಆಗಿ ಮಾಡಿರುತ್ತಾರೆ.

ಅಧ್ಯಕ್ಷರು: ನೀವು ಉತ್ತರ ಹೇಳುವುದಕ್ಕೆ ಬಿಡದಿದ್ದರೆ ನಾನು ಮುಕ್ತಾಯ ಮಾಡುತ್ತೇನೆ.

ಶ್ರೀ ಸಿ ಎಂ ಉದಾಸಿ: 2007–08 ರಲ್ಲಿ ಲಿಂಕ್ ರೋಡ್‌ಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೆವು. ಈಗ ಎಸ್.ಟಿ. ಕಾಲೋನಿಗಳಲ್ಲಿ ಕೆಲಸ ಮಾಡಬೇಕೆಂದು

ಗುರಿ ಇಟ್ಟುಕೊಂಡು ಕೆಲಸ ಪ್ರಾರಂಭ ಮಾಡಿದ್ದಾರೆ. ಅವರಿಗೆ ಗೊತ್ತಿದೆ. ಅವರು ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಮೇಲೆ ಅವರ ಆರೋಪ. ಈ ಆರೋಪಗಳ ಬಗ್ಗೆ ಹಿಂದೆ ಸಹ ವಿಚಾರಣೆ ಮಾಡಿ ಆಗಿದೆ. ಮತ್ತೊಂದು ಸಾರಿ ಮಾಹಿತಿ ತರಿಸಿಕೊಡಬೇಕೆಂದರೆ ಮಾಹಿತಿ ತರಿಸಿಕೊಡುವಂತಹ ಕೆಲಸ ಮಾಡುತ್ತೇನೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸಚಿವರು ಇನ್ನೂ ಮೇಲಿನ ಅಧಿಕಾರಕ್ಕೆ ಹೋಗುವವರಿದ್ದಾರೆ. ಯಾವ ಅಧಿಕಾರಿ ಮೇಲೆ ನಾನು ಆರೋಪ ಮಾಡುತ್ತಿಲ್ಲ. ಸುಮಾರು ಒಂದು ಕೋಟಿ ರೂ. ಏನು ಖರ್ಚು ಮಾಡಿದ್ದಾರೆ, ಆ ಎಸ್.ಸಿ. ಎಸ್.ಟಿ. ಜನರಿಗೆ ಅನುಕೂಲ ಆಗಲಿ ಎಂದು ನಾನು ಈ ವಿಷಯ ಎತ್ತುತ್ತಿದ್ದೇನೆ ಹೊರತು ಇದರಲ್ಲಿ ಬೇರೆ ಉದ್ದೇಶ ಇಲ್ಲ, ಇದು ಏನು ಮಾಡಿದ್ದಾರೆಂದರೆ, ಸ್ಟೇಟ್ ಹೈವೇ ಮೇಲೆ ಕ್ರಿಯಾ ಯೋಜನೆ ಮಾಡಿ ಆ ಮೇಲೆ MDR ಮತ್ತು state highway maintenance ಗಾಗಿ ಏನು ದುಡ್ಡು ಬರುತ್ತದೆ ಆ ದುಡ್ಡು ಖರ್ಚು ಮಾಡಿದ್ದಾರೆ. ತಾವು ಬೇಕಾದರೆ enquiry ಮಾಡಿ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಮಾಹಿತಿ ತರಿಸಿ ಅವರಿಗೆ ಉತ್ತರ ಕೊಡುತ್ತೇನೆ.

ತೋಟಗಾರಿಕೆ ಇಲಾಖೆಯಲ್ಲಿ ಮರು ವಿಂಗಡಣೆಯ ಬಗ್ಗೆ

72(553) ಶ್ರೀ ನರೆಂದ್ರ ಬಾಬು ನೆ ಲ:(ಮಹಾಲಕ್ಷ್ಮೀ ಲೇಔಟ್) ಮಾನ್ಯ ತೋಟಗಾರಿಕೆ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಇಲಾಖೆಯಲ್ಲಿ ಮರು ವಿಂಗಡಣೆ ಅವಶ್ಯಕತೆಯೇನು, ಮರು ವಿಂಗಡಣೆಯನ್ನು ವೈಜ್ಞಾನಿಕ ಮಾನದಂಡಗಳನ್ವಯ ಮಾಡಲಾಗಿದೆಯೇ? (ವಿವರ ನೀಡುವುದು)

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರಕ್ಕೆ ಯಾವುದಾದರೂ ವರದಿಯನ್ನು ಸಲ್ಲಿಸಲಾಗಿದೆಯೇ (ವರದಿ ಪ್ರತಿ ನೀಡುವುದು)

ಇ) ಮರು ವಿಂಗಡಣೆಯನ್ನು ಋತು ಮಾಸದಲ್ಲಿ ಮಾಡುತ್ತಿರುವುದರಿಂದ, ತೋಟಗಾರಿಕೆ ಯೋಜನೆಗಳ ಅನುಷ್ಠಾನದ ಮೇಲೆ ದುಷ್ಪರಿಣಾಮವಾಗುವುದಿಲ್ಲವೇ (ವಿವರ ನೀಡುವುದು)